# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 805

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 25-09-2020

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೊರೋನಾ-19 ರಿಂದ ಸಾರಿಗೆ ಇಲಾಖೆಯಲ್ಲಿ ಉದ್ಭವಿಸಿರುವ ಸಮಸ್ಯೆಗಳಾವುವು; ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು; (ವಿವರವಾದ ಮಾಹಿತಿ ನೀಡುವುದು) | ಸಾರಿಗೆ ಸಂಸ್ಥೆಗಳಲ್ಲಿ ಉದ್ಭವಿಸಿರುವ ಸಮಸ್ಯೆಗಳು ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.<br><br>ಸಾರಿಗೆ ಸಂಸ್ಥೆಗಳಲ್ಲಿ ಉದ್ಭವಿಸಿರುವ ಸಮಸ್ಯೆಗಳಿಂದಾಗಿ ಆದಾಯ ಕುಂಠಿತವಾಗಿದ್ದು, ಅಧಿಕಾರಿ/ನೌಕರರುಗಳಿಗೆ ಏಪ್ರಿಲ್-2020 ರಿಂದ ಸೆಪ್ಟೆಂಬರ್-2020 ಮಾಹೆಗಳವರೆಗೆ ವೇತನ ಪಾವತಿಸಲು ಸರ್ಕಾರದಿಂದ ವಿಶೇಷ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ. |
| ಆ. | ಸಾರಿಗೆ ಇಲಾಖೆ ಸಿಬ್ಬಂದಿಗಳಿಗೆ ಕೊರೋನಾ-19 ರಿಂದ ಜೀವ ರಕ್ಷಿಸಿಕೊಳ್ಳಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ; ಈ ಸಂಬಂಧ ಸರ್ಕಾರ ಎಷ್ಟು ಮೊತ್ತವನ್ನು ಖರ್ಚು ಮಾಡಿದೆ; (ವಿವರವಾದ ಮಾಹಿತಿ ನೀಡುವುದು) | ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯಲ್ಲಿ ನೋವೆಲ್ ಕೊರೋನ ವೈರಾಣು (ಕೋವಿಡ್-19) ಸಾಂಕ್ರಾಮಿಕ ರೋಗ ಹರಡದಂತೆ ಕಛೇರಿಗೆ ಬರುವ ಸಾರ್ವಜನಿಕರಲ್ಲಿ ಸಾಮಾಜಿಕ ಅಂತರ ಕಾಪಾಡುವಿಕೆ, ಮಾಸ್ಕ್ ಧರಿಸುವುದು, ಸ್ಯಾನಿಟೈಸರ್‌ಗಳನ್ನು ಬಳಸುವುದು ಮತ್ತು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸುವುದು, ಮುಂತಾದ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ಕಲಿಕಾ ಹಾಗೂ ಚಾಲನಾ ಅನುಜ್ಞಾ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ಸ್ಲಾಟ್ ಬುಕ್ಕಿಂಗ್‌ನಲ್ಲಿ ಪ್ರತಿದಿನ 50% ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಮಾಡಿಕೊಡುವಂತೆ ರಾಜ್ಯದ ಎಲ್ಲಾ ಕಛೇರಿ ಮುಖ್ಯಸ್ಥರುಗಳಿಗೆ ನಿರ್ದೇಶಿಸಲಾಗಿದೆ.<br><br>ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿನ ಕಚೇರಿಗಳಿಗೆ ಕೋವಿಡ್-19ಗೆ ಸಂಬಂಧಿಸಿದಂತೆ, Sanitizer, Mask, Disinfection activities ಮತ್ತು ಇತರೆ ಉದ್ದೇಶಗಳಗಾಗಿ ರೂ. 13,05,790/-ಗಳ ವೆಚ್ಚವನ್ನು ಖರ್ಚು ಮಾಡಲಾಗಿರುತ್ತದೆ.<br><br>ಸಾರಿಗೆ ಸಂಸ್ಥೆಗಳಲ್ಲಿ ಸಿಬ್ಬಂದಿಗಳಿಗೆ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸದಾ ಮಾಸ್ಕ್ ಧರಿಸುವುದು, ಕೈಗಳನ್ನು ಆಗಾಗ್ಗೆ ಸ್ಯಾನಿಟೈಸ್ ಮಾಡುವುದು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಇತ್ಯಾದಿಗಳ ಕುರಿತು ನಿರಂತರವಾಗಿ ಆಯಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆರೋಗ್ಯ ಅಧಿಕಾರಿಗಳ ಸಹಯೋಗದಲ್ಲಿ ಜಾಗೃತಿ/ ತಿಳುವಳಿಕೆ ನೀಡಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ.<br><br>ಉಳಿದಂತೆ, ಕಾರ್ಯಸ್ಥಾನ, ಬಸ್ಸುಗಳು ಮತ್ತು ಬಸ್‌ನಿಲ್ದಾಣಗಳ ಶುಚಿತ್ವ ಮತ್ತು ನಿರ್ವಹಣೆ ಬಗ್ಗೆ ಹೆಚ್ಚಿನ ಗಮನ ಹರಿಸಲಾಗಿದೆ. ಅಲ್ಲದೇ ಕೋವಿಡ್-19 ಪಾಸಿಟಿವ್ ಕಂಡುಬಂದ ಪ್ರಕರಣಗಳಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಉತ್ತಮ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಮತ್ತು ಅಂತಹ ನೌಕರರನ್ನು ವಿಚಾರಿಸಿ ಆಪ್ತ ಸಲಹೆಗೆ ಒಳಪಡಿಸಿ, ಅವರಿಗೆ ಮನೋಸ್ಥೈರ್ಯವನ್ನು ತುಂಬಲಾಗುತ್ತಿದೆ. ಅಲ್ಲದೇ, ಅವಶ್ಯಕತೆಗೆ ಅನುಗುಣವಾಗಿ ವೈದ್ಯಕೀಯ ಮುಂಗಡ ಮಂಜೂರು ಮಾಡಲಾಗುತ್ತಿದೆ. |

ಬೆಂಗಳೂರಿನ ಪೀಣ್ಯದಲ್ಲಿರುವ ನಿಗಮದ ಬಸವೇಶ್ವರ ಬಸ್ ನಿಲ್ದಾಣದಲ್ಲಿ ಕೋವಿಡ್ ಆರೈಕೆ ಕೇಂದ್ರವನ್ನು (covid care centre) ಪ್ರಕ್ರಿಯಾ ಆಸ್ಪತ್ರೆಯವರ ಸಹಯೋಗದೊಂದಿಗೆ ಆರಂಭಿಸಲಾಗಿದೆ. ಸದರಿ ಕೋವಿಡ್ ಆರೈಕೆ ಕೇಂದ್ರದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾದ ಪ್ರಕರಣಗಳ ಪೈಕಿ Asymptomatic ಎಂದು ಜಿಲ್ಲಾ ಆರೋಗ್ಯ ಅಧಿಕಾರಿಗಳು ಪ್ರಮಾಣೀಕರಿಸಿದ ಮತ್ತು ಈ Institution quarantine ಕೇಂದ್ರದಲ್ಲಿ ಆರೈಕೆ ಪಡೆಯಲು ಇಚ್ಛಿಸುವ ರಸ್ತೆ ಸಾರಿಗೆ ನಿಗಮಗಳ ನೌಕರರ / ಅಧಿಕಾರಿಗಳು ಹಾಗೂ ಅವರ ಅವಲಂಬಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಒಟ್ಟಾರೆಯಾಗಿ ಸರ್ಕಾರ ಮತ್ತು ಆರೋಗ್ಯ ಇಲಾಖೆಯಿಂದ ಹೊರಡಿಸಲಾದ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ (SOP Guidelines) ಪಾಲಿಸಲಾಗುತ್ತಿದೆ.

ಸಂಸ್ಥೆಗಳ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳಿಗೆ ಹಾಗೂ ಪ್ರಯಾಣಿಕರಿಗೆ ಸಾಂಕ್ರಾಮಿಕ ರೋಗ ಹರಡದಂತೆ ಬಸ್ಸುಗಳಲ್ಲಿ ಶುಚಿತ್ವವನ್ನು ಕಾಪಾಡಲು, ಸೋಂಕು ನಿವಾರಣಾ ಔಷಧಿಗಳನ್ನು ಸಿಂಪಡಿಸಿ ಶುಚಿಗೊಳಿಸಲಾಗುತ್ತಿದೆ.

ಚಾಲನಾ ಸಿಬ್ಬಂದಿಗಳ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗ ಹರಡದಂತೆ ತಡೆಗಟ್ಟಲು ಅವಶ್ಯವಿರುವ ಮುಖಗವಸು ಮತ್ತು ಸ್ಯಾನಿಟೈಸರ್‌ಗಳನ್ನು ಸರಬರಾಜುಗೊಳಿಸಲಾಗಿರುತ್ತದೆ. ನಿರ್ವಾಹಕರಿಗೆ face shield ನ್ನು ಒದಗಿಸಲಾಗಿರುತ್ತದೆ. ಕರ್ತವ್ಯದ ಅವಧಿಯಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸನ್ನು/ face shield ಧರಿಸುವಂತೆ ಮತ್ತು ಸ್ಯಾನಿಟೈಸರ್‌ನ್ನು ಬಳಸಿ ಶುಚಿತ್ವವನ್ನು ಕಾಪಾಡುವಂತೆ ತಿಳಿಸಲಾಗಿರುತ್ತದೆ.

ಕೊರೊನಾ ಹರಡುವುದನ್ನು ತಪ್ಪಿಸುವ ಅಂಗವಾಗಿ ಎಲ್ಲಾ ಸಿಬ್ಬಂದಿಗಳ ಸ್ವಾಬ್ ಟೆಸ್ಟ್ ಮಾಡಿಸಿ ಸೋಂಕಿತರನ್ನು ಸಾಕಷ್ಟು ಮುಂಚಿತವಾಗಿ ಗುರುತಿಸಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

ಸರ್ಕಾರದ ಎಸ್‌ಓಪಿ ನಿಯಮದ ಪ್ರಕಾರ 55 ವರ್ಷ ಮೇಲ್ಪಟ್ಟ ನೌಕರರಿಗೆ ಹಾಗೂ ತೀವ್ರತರವಾದ ಕಾಯಿಲೆಗಳಿಂದ ಬಳಲುತ್ತಿರುವ ಸಿಬ್ಬಂದಿಗಳಿಗೆ ರಜೆ ನೀಡಲಾಗಿರುತ್ತದೆ.

ಏಪ್ರಿಲ್, ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗದೆ ಇರುವ ಸಿಬ್ಬಂದಿಗಳಿಗೆ ರಜೆಯನ್ನು ಮಂಜೂರು ಮಾಡಿ ಪೂರ್ಣ ಪ್ರಮಾಣದ ವೇತನ ನೀಡಲಾಗಿರುತ್ತದೆ.

ಸಾರಿಗೆ ಸಂಸ್ಥೆಗಳು ಸಾರಿಗೆ ಸಂಸ್ಥೆಗಳ ಸಿಬ್ಬಂದಿಗಳಿಗೆ ಕರೋನಾ-19 ದಿಂದ ಜೀವ ರಕ್ಷಿಸಿಕೊಳ್ಳಲು ಮಾರ್ಚ್-2020 ರಿಂದ ಸೆಪ್ಟಂಬರ್-2020ರವರೆಗೆ (ಸ್ಯಾನಿಟೈಸರ್, ಮುಖಗವಚ, ಡೆಟ್ಟಾಲ್, ಸೋಡಿಯಂ ಹೈಪೋ ಕ್ಲೋರೈಟ್, ಕೈಗವಚ, ಥರ್ಮೋಮೀಟರ್ ಸೆನ್ಸಾರ್, ಆಕ್ಸೀಮೀಟರ್ ಇತ್ಯಾದಿಗಳಿಗೆ) ಖರ್ಚು ಮಾಡಿದ ಮೊತ್ತದ ವಿವರ ಈ ಕೆಳಕಂಡಂತಿದೆ:

ರೂಪಾಯಿಗಳಲ್ಲಿ

| ಸಂಸ್ಥೆಗಳು | ಖರ್ಚು ಮಾಡಿದ ಮೊತ್ತ |
|---|---|
| ಕ.ರಾ.ರ.ಸಾ.ನಿ | 87,44,427.62 |
| ಬೆಂ.ಮ.ಸಾ.ಸಂಸ್ಥೆ | 98,71,759.05 |
| ವಾ.ಕ.ರ.ಸಾ.ಸಂಸ್ಥೆ | 28,27,614.00 |
| ಈ.ಕ.ರ.ಸಾ.ಸಂಸ್ಥೆ | 27,68,000.00 |

...3

| | | |
|---|---|---|
| ಇ. | ಸಾರ್ವಜನಿಕ ಬಸ್ಸುಗಳಲ್ಲಿ ಸಾಮಾಜಿಕ ಅಂತರ ಕಾಪಾಡುವ ಸಂಬಂಧ ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಬಸ್ಸಿನಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆಯೇ; ಇದರಿಂದ ಇಲಾಖೆಗೆ ಆಗಿರುವ ಲಾಭ ಮತ್ತು ನಷ್ಟವೇನು; ಇದನ್ನು ಸರಿದೂಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು; | ರಾಜ್ಯದಲ್ಲಿ ಎಲ್ಲಾ ಪ್ರಯಾಣಿಕ ಬಸ್ಸುಗಳಿಗೆ (ಹವಾ ನಿಯಂತ್ರಿತ ಬಸ್ಸುಗಳನ್ನು ಹೊರತುಪಡಿಸಿ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊರಡಿಸಿರುವ SOP ಮತ್ತು ಪ್ರಯಾಣದ ಕುರಿತು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಕಾರ್ಯಾಚರಣೆ ಮಾಡಲು ಅನುಮತಿ ನೀಡಲಾಗಿರುತ್ತದೆ.<br><br>ಸಾರಿಗೆ ಸಂಸ್ಥೆಗಳು ಮೇ-2020ರಿಂದ ಆಗಷ್ಟ್-2020ರ ವರೆಗಿನ ಅವಧಿಯಲ್ಲಿ ಬಸ್‌ಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ದೃಷ್ಟಿಯಿಂದ, ಬಸ್ಸಿನಲ್ಲಿರುವ ಆಸನಗಳಲ್ಲಿ 2 ಆಸನಗಳಲ್ಲಿ ಒಬ್ಬರು (1) ಮತ್ತು 3 ಆಸನಗಳಲ್ಲಿ ಇಬ್ಬರು (2) ಜನ ಪ್ರಯಾಣಿಕರು ಕುಳಿತು ಪ್ರಯಾಣಿಸಲು ಅವಕಾಶ ಕಲ್ಪಿಸಿ, ಪ್ರತಿ ಬಸ್ಸಿನಲ್ಲಿ 30ಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ಪ್ರಯಾಣಿಸದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. ಸೆಪ್ಟೆಂಬರ್-2020ರ ಮಾಹೆಯಿಂದ ಲಾಕ್ ಡೌನ್ ನಿರ್ಬಂಧ ಸಡಿಲಿಕೆಯಿಂದಾಗಿ ಆಸನ ಸಂಖ್ಯೆಗನುಗುಣವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಕೋವಿಡ್-19 ಹಿನ್ನಲೆಯಲ್ಲಿ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ, ಕಲಂ 16(1)ರಂತೆ ರಾಜ್ಯದಲ್ಲಿ ನೋಂದಾಯಿಸಿರುವ ಎಲ್ಲಾ ಪ್ರಯಾಣಿಕ ಮತ್ತು ಸರಕು ಸಾರಿಗೆ ವಾಹನಗಳ ಮೋಟಾರು ವಾಹನ ತೆರಿಗೆಯನ್ನು ದಿನಾಂಕ:24-03-2020 ರಿಂದ 23-05-2020ರವೆಗೆ ಒಟ್ಟು 02 ತಿಂಗಳ ಅವಧಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ ಹಾಗೂ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1)ರ ನಿಯಮಗಳನ್ನು ಸಡಿಲಿಸಿ ನೆರೆ ರಾಜ್ಯಗಳಲ್ಲಿ ನೋಂದಣಿಯಾಗಿ ಅಂತರರಾಜ್ಯ ಒಪ್ಪಂದದಡಿಯಲ್ಲಿ ಮೇಲು ಸಹಿ ರಹದಾರಿ ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ: 15-04-2020ರೊಳಗಾಗಿ ಪಾವತಿಸಬೇಕಾಗಿದ್ದ ದ್ವಿಪಕ್ಷೀಯ ತೆರಿಗೆಯನ್ನು ದಂಡರಹಿತವಾಗಿ ಪಾವತಿಸಲು ದಿನಾಂಕ:01-06-2020 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.<br><br>ಕೋವಿಡ್-19 ಹಿನ್ನಲೆಯಲ್ಲಿ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1)ರ ನಿಯಮಗಳನ್ನು ಸಡಿಲಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ:15-04-2020 ಮತ್ತು 15-05-2020 ರೊಳಗಾಗಿ ಪಾವತಿಸಿಬೇಕಾಗಿದ್ದ ತೆರಿಗೆಯನ್ನು ದಿನಾಂಕ:15-07-2020 ರವರೆಗೆ ಹಾಗೂ ದಿನಾಂಕ:15-08-2020 ಮತ್ತು 15-09-2020 ರೊಳಗಾಗಿ ಪಾವತಿಸಿಬೇಕಾಗಿದ್ದ ತೆರಿಗೆಯನ್ನು ದಿನಾಂಕ:30-09-2020 ರವರೆಗೆ ದಂಡರಹಿತವಾಗಿ ಪಾವತಿಸಲು ವಿಸ್ತರಿಸಲಾಗಿದೆ ಹಾಗೂ ಮೋಟಾರು ವಾಹನಗಳ ಕಾಯ್ದೆ 1988 ಮತ್ತು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989 ರಡಿಯಲ್ಲಿ ವಿತರಿಸಿರುವ ಎಲ್ಲಾ ತರಹದ ದಾಖಲಾತಿಗ ಪೈಕಿ ದಿನಾಂಕ: 01-02-2020 ರಿಂದ ಸಿಂಧುತ್ವ ಮುಕ್ತಾಯಗೊಂಡಿರುವಂತಹ ಅವಧಿಯನ್ನು ದಿನಾಂಕ:31-12-2020 ರವರೆಗೆ ವಿಸ್ತರಿಸಲಾಗಿದೆ.<br><br>ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ರೂ.5000/-ಗಳ ಪರಿಹಾರ ಧನವನ್ನು ವಿತರಿಸುವ ಸಂಬಂಧವಾಗಿ ಒಟ್ಟು 2,45,000 ಅರ್ಜಿಗಳು ಸೇವಾಸಿಂಧು ಪೋರ್ಟಲ್ ಮುಖಾಂತರ ಸ್ವೀಕೃತವಾಗಿದ್ದು, ಈವರೆವಿಗೂ 2,14,000 ಅರ್ಜಿಗಳಿಗೆ ಪರಿಹಾರ ಧನವನ್ನು ಪಾವತಿಸಲಾಗಿದ್ದು, ಉಳಿದ ಅರ್ಜಿಗಳ ಬಗ್ಗೆ ಕ್ರಮ ವಹಿಸಲಾಗುತ್ತಿದೆ. |

<table>
<tr>
<td>ಈ.</td>
<td>ಕೊರೋನಾ–19ರಿಂದ ಸಾರಿಗೆ ಇಲಾಖೆಗೆ ಆದ ನಷ್ಟವೆಷ್ಟು; (ನಿಗಮವಾರು ಮಾಹಿತಿ ನೀಡುವುದು)</td>
<td>ಸಾರಿಗೆ ಸಂಸ್ಥೆಗಳಿಗೆ ಆದ ನಷ್ಟದ ವಿವರ ಈ ಕೆಳಕಂಡಂತಿದೆ;<br><br>(ರೂ.ಕೋಟಿಗಳಲ್ಲಿ)<br>
<table>
<tr><th>ಸಂಸ್ಥೆಗಳು</th><th>ನಷ್ಟ</th></tr>
<tr><td>ಕ.ರಾ.ರ.ಸಾ.ನಿಗಮ</td><td>1211.52</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>696.41</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>695.00</td></tr>
<tr><td>ಈ.ಕ.ರಾ.ಸಾ.ಸಂಸ್ಥೆ</td><td>727.66</td></tr>
</table>
ನಷ್ಟವನ್ನು ಸರಿದೂಗಿಸಲು ಕೈಗೊಂಡಿರುವ ಕ್ರಮವನ್ನು 'ಉ' ನಲ್ಲಿ ಒದಗಿಸಲಾಗಿದೆ.</td>
</tr>
<tr>
<td>ಉ.</td>
<td>ಇದನ್ನು ಯಾವ ರೀತಿ ಸರಿದೂಗಿಸಲಾಗುವುದು?</td>
<td>ಕರೋನಾ–19 ರಿಂದ ಉಂಟಾಗಿರುವ ನಷ್ಟವನ್ನು ಸರಿದೂಗಿಸಲು ಮುಂದಿನ ದಿನಗಳಲ್ಲಿ ಹೆಚ್ಚಿನ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸಬೇಕಿರುತ್ತದೆ. ಈ ಸಂಬಂಧ ಈ ಕೆಳಕಂಡ ಸೇವೆಗಳನ್ನು ಪರಿಣಾಮಕಾರಿಯಾಗಿ ವಿಸ್ತರಿಸಲು ಸಾರಿಗೆ ಸಂಸ್ಥೆಗಳು ಸನ್ನದ್ಧವಾಗಿರುತ್ತವೆ.<br><br>• ಹಂತ–ಹಂತವಾಗಿ ಕೊರೋನಾ–19 ಲಾಕ್‌ಡೌನ್ ಪೂರ್ವದಲ್ಲಿದಂತೆ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಮತ್ತು ಆದಾಯವನ್ನು ಗಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ವರ್ಷ ಯಾವುದೇ ಹೊಸ ಅನುಸೂಚಿಗಳನ್ನು ಪ್ರಾರಂಭಿಸದೇ ಇರುವುದರಿಂದ ಹೊಸ ವಾಹನ ಖರೀದಿಯನ್ನು ಮುಂದೂಡಲಾಗುವುದು.<br><br>• ಕೋವಿಡ್–19 ರ ಸಮಯದಲ್ಲಿ ಹಾಗೂ ಅದಕ್ಕೂ ಮುಂಚಿನ ಅವಧಿಯಲ್ಲಿ ನಿಗಮದ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳು ಖಾಲಿ ಉಳಿದಿದ್ದು, ಸದರಿ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆಗೊಳಿಸಿ ಸಾರಿಗೇತರ ಆರ್ಥಿಕ ಆದಾಯ ಉತ್ತಮ ಪಡಿಸಲು ಪ್ರಯತ್ನಿಸಲಾಗುತ್ತಿದೆ. ಜಾಹಿರಾತು ಹೋರ್ಡಿಂಗ್ಸ್, ಜಾಹಿರಾತು ಫಲಕಗಳು ಹಾಗೂ ರಸ್ತೆ ಬದಿಯ ಫಲಹಾರ ಮಂದಿರಗಳ ವಾಣಿಜ್ಯ ಆದಾಯ ಸಹ ಕೋವಿಡ್–19 ರ ಸಂಬಂಧ ಇಳಿಮುಖವಾಗಿದ್ದು, ನಿಗಮದ ಸಾರಿಗೆಗಳ ಆಚರಣೆ ಪ್ರಮಾಣ ಹೆಚ್ಚಳಗೊಂಡಂತೆ ಈ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದು.<br><br>• ಕರೋನಾ ಭೀತಿಯಿಂದಾಗಿ ಸಾರ್ವಜನಿಕರು ಮದುವೆ, ಪ್ರವಾಸ ಇತ್ಯಾದಿ ಕಾರಣಗಳಿಗೆ ಸಾಂದರ್ಭಿಕ ಒಪ್ಪಂದದ ಬಸ್ಸುಗಳನ್ನು ತೀರಾ ಕಡಿಮೆ ಪ್ರಮಾಣದಲ್ಲಿ ಪಡೆಯುತ್ತಿದ್ದು, ಈ ಬಗ್ಗೆ ವ್ಯಾಪಕ ಮುಂಜಾಗ್ರತ ಕ್ರಮದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರನ್ನು ಆಕರ್ಷಿಸಿ ಸಾಂದರ್ಭಿಕ ಒಪ್ಪಂದದ ಬಸ್ಸುಗಳನ್ನು ಒದಗಿಸಲು ನಿಗಮವು ಸಿದ್ಧತೆ ಮಾಡಿಕೊಂಡಿರುತ್ತದೆ. ಶಾಲಾ/ ಕಾಲೇಜುಗಳು ನಡೆಯುತ್ತಿಲ್ಲವಾದ್ದರಿಂದ ಗುತ್ತಿಗೆ ಆಧಾರದ ಬಸ್ಸುಗಳ ಆದಾಯವು ಪ್ರಸ್ತುತ ಸ್ಥಗಿತವಾಗಿದ್ದು, ಶಾಲಾ / ಕಾಲೇಜುಗಳು ಪುನರಾರಂಭವಾದ ಕೂಡಲೇ ಈ ಸೇವೆಗಳನ್ನು ಸಹ ಒದಗಿಸಲಾಗುವುದು.<br><br>• ಪಾರ್ಸಲ್ ಮತ್ತು ಕೊರಿಯರ್ ಸೇವೆಯನ್ನು ಪ್ರಾರಂಭಿಸಲು ಯೋಜಿಸಿದ್ದು, ಇದರಿಂದ ಸಾರಿಗೇತರ ಆದಾಯವನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡಲಾಗಿದ್ದು, ಈ ಮೂಲಕ ಸಿಬ್ಬಂದಿ ವೆಚ್ಚವನ್ನು ನಿಯಂತ್ರಿಸಿ ನಿಗಮದ ನಷ್ಟವನ್ನು ತಗ್ಗಿಸಲು ಕ್ರಮವಹಿಸಲಾಗಿದೆ. ಹೊರಗುತ್ತಿಗೆ ಆಧಾರಿತ ಸಿಬ್ಬಂದಿಗಳ ಸೇವೆಯನ್ನು ಬಹುತೇಕ ಸ್ಥಗಿತಗೊಳಿಸಲಾಗಿದೆ.</td>
</tr>
</table>

| | | |
|---|---|---|
| | | • ಕೊರೋನಾ–19ರಿಂದ ನಿಗಮದ ಆದಾಯದ ಸಂಗ್ರಹದಲ್ಲಿ ಕೊರತೆ ಉಂಟಾಗಿ ನೌಕರರ ವೇತನ ಪಾವತಿ ಮಾಡಲು ಹಾಗೂ ಇತರೇ ಕಾರ್ಯಾಚರಣೆ ವೆಚ್ಚ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ತೆಗೆದುಕೊಳ್ಳಬೇಕಾದ ಕಾರ್ಯ ಯೋಜನೆಗಳಿಗೆ ಹಣಕಾಸಿನ ಸಂಕಷ್ಟ ಉಂಟಾಗಿರುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ಇಲಾಖೆಯಲ್ಲಿ ಉದ್ಭವಿಸಿರುವ ಸಮಸ್ಯೆಗಳಲ್ಲಿ ಒಂದಾದ ವೇತನ ಪಾವತಿ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದಿಂದ ಎಪ್ರಿಲ್ 2020ರಿಂದ ಸೆಪ್ಟೆಂಬರ್ 2020ರವರೆಗಿನ ವೇತನ ಪಾವತಿಸಲು ವಿಶೇಷ ಅನುದಾನ ಬಿಡುಗಡೆಗೊಳಿಸಿದೆ.<br><br>• 2020–21ನೇ ಸಾಲಿನಲ್ಲಿ ಹೊಸ ವಾಹನಗಳ ಖರೀದಿ ಪ್ರಕ್ರಿಯೆ ಹಾಗೂ ಹೊಸ ಕಾಮಗಾರಿಗಳ ಕಾರ್ಯಗಳನ್ನು ಕೈಗೊಳ್ಳುವುದನ್ನು ಸ್ಥಗಿತಗೊಳಿಸಲಾಗಿದೆ. |

ಸಂಖ್ಯೆ: ಟಿಡಿ 163 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ

**ಕೋವಿಡ್-19 ಸಮಯದಲ್ಲಿ ಸಾರಿಗೆ ಸಂಸ್ಥೆಗಳಲ್ಲಿ ಉದ್ಭವಿಸಿರುವ ಸಮಸ್ಯೆಗಳು ಹಾಗೂ ಕೈಗೊಂಡಿರುವ ಕ್ರಮಗಳು:**

- ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶದನ್ವಯ ದಿನಾಂಕ 22.03.2020 ರಿಂದ ಸಂಪೂರ್ಣ ಲಾಕ್‌ಡೌನ್ ಘೋಷಿಸಿದರಿಂದ ದಿನಾಂಕ:23.03.2020 ರಿಂದ 03.05.2020 ರವರೆಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದರಿಂದ ಸಾರಿಗೆ ಆದಾಯ ನಷ್ಟವಾಗಿರುತ್ತದೆ.
- ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನಗಳನ್ವಯ ದಿನಾಂಕ 04.05.2020 ರಿಂದ ಹಸಿರು ವಲಯದ ಜಿಲ್ಲೆಗಳಲ್ಲಿ ಜಿಲ್ಲೆಯೊಳಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದ್ದರೂ ಪ್ರಯಾಣಿಕರ ಕೊರತೆಯಿಂದ ಸಾರಿಗೆ ಆದಾಯ ತೀರಾ ಕಡಿಮೆ ಬಂದಿರುತ್ತದೆ.
- ದಿನಾಂಕ 05.06.2020 ರವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದ ಕಾರಣ ರಾತ್ರಿ ಸಾರಿಗೆಗಳನ್ನು ಆಚರಣೆ ಮಾಡದೇ ಸಾರಿಗೆ ಆದಾಯ ಕಡಿಮೆಯಾಗಿರುತ್ತದೆ.
- ದಿನಾಂಕ 31.08.2020 ರವರೆಗೂ ಎಲ್ಲಾ ರೀತಿಯ ಬಸ್ಸುಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ಪರ್ಯಾಯವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿರುತ್ತವೆ. ಅಂದರೆ, ವಾಹನದ ಆಸನ ಸಂಖ್ಯೆಯ ಶೇ.50 ರಷ್ಟು ಮಾತ್ರ ಪ್ರಯಾಣಿಕರನ್ನು ಅನುಮತಿಸಲಾಗಿರುತ್ತವೆ. ಇದರಿಂದ ಸಂಸ್ಥೆಗೆ ಆರ್ಥಿಕ ಹೊರೆಯಾಗುತ್ತಿದ್ದರೂ, ಪ್ರಯಾಣಿಕರಿಗೆ ಪ್ರಯಾಣ ದರದಲ್ಲಿ ಯಾವುದೇ ಏರಿಕೆ ಮಾಡಿರುವುದಿಲ್ಲ.
- ದಿನಾಂಕ 24.06.2020 ರವರೆಗೂ ಎ/ಸಿ ಬಸ್ಸುಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ದಿನಾಂಕ 25.06.2020 ರಿಂದ ಎ/ಸಿ ಬಸ್ಸುಗಳನ್ನು ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಎ/ಸಿ ಬಸ್ಸುಗಳಿಗೆ ಪ್ರಯಾಣಿಕರಿಂದ ಬೇಡಿಕೆ ಕುಸಿದಿರುವುದರಿಂದ ಸಾರಿಗೆ ಆದಾಯ ಕಡಿಮೆಯಾಗಿರುತ್ತದೆ.
- ಅಂತರ ರಾಜ್ಯ ಸಾರಿಗೆಗಳಲ್ಲಿ, ದಿನಾಂಕ 17.06.2020 ರಿಂದ ಆಂಧ್ರಪ್ರದೇಶ ರಾಜ್ಯಕ್ಕೆ, ದಿನಾಂಕ 07.09.2020 ಗೋವಾ ರಾಜ್ಯಕ್ಕೆ ಹಾಗೂ ದಿನಾಂಕ 22.09.2020 ರಿಂದ ಮಹಾರಾಷ್ಟ್ರ ರಾಜ್ಯಕ್ಕೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ತಮಿಳುನಾಡು, ತೆಲಂಗಾಣ, ಕೇರಳ ಮತ್ತು ಗೋವಾ ರಾಜ್ಯಗಳಿಗೆ ಸಾರಿಗೆಗಳನ್ನು ಸಂಬಂಧಿಸಿದ ರಾಜ್ಯಗಳ ಅನುಮತಿ ದೊರೆಯದ ಕಾರಣ ಸಾರಿಗೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿರುವುದಿಲ್ಲ.
- ಲಾಕ್‌ಡೌನ್ ಪೂರ್ವದ ದಿನಗಳಿಗೆ ಹೋಲಿಕೆ ಮಾಡಿದಲ್ಲಿ ಪ್ರಸ್ತುತ ಶೇ.50% ರಷ್ಟು ಮಾತ್ರ ಸಾರಿಗೆಗಳು ಕಾರ್ಯಾಚರಣೆಯಾಗುತ್ತಿದೆ. ದಿನಾಂಕ 31.08.2020 ರವರೆಗೆ ಶೇ.50% ರಷ್ಟು ಆಸನಗಳಲ್ಲಿ ಮಾತ್ರ ಪ್ರಯಾಣಿಕರನ್ನು ಅನುಮತಿಸುತ್ತಿದ್ದರಿಂದ ಹಾಗೂ ಪ್ರಯಾಣಿಕರ ಬೇಡಿಕೆ ಇಲ್ಲದೇ ಇರುವುದರಿಂದ ಸಾರಿಗೆಗಳನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಮಾಡಲು ಸಾಧ್ಯವಾಗದೇ ಹಾಗೂ ಕಾರ್ಯಾಚರಣೆಯಾಗುತ್ತಿರುವ ಸಾರಿಗೆಗಳಲ್ಲಿ ನಿರೀಕ್ಷಿತ ಪ್ರಯಾಣಿಕರು ಪ್ರಯಾಣಿಸದ ಕಾರಣ ಸಾರಿಗೆ ನಿಗಮಗಳು ತೀರಾ ನಷ್ಟ ಅನುಭವಿಸುತ್ತಿರುತ್ತವೆ.
- ಕೊರೋನಾ-19ರಿಂದ ನಿಗಮದ ಆದಾಯದ ಸಂಗ್ರಹದಲ್ಲಿ ಕೊರತೆ ಉಂಟಾಗಿ ನೌಕರರ ವೇತನ ಪಾವತಿ ಮಾಡಲು ಹಾಗೂ ಇತರೇ ಕಾರ್ಯಾಚರಣೆ ವೆಚ್ಚ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ತೆಗೆದುಕೊಳ್ಳಬೇಕಾದ ಕಾರ್ಯ ಯೋಜನೆಗಳಿಗೆ ಹಣಕಾಸಿನ ಸಂಕಷ್ಟ ಉಂಟಾಗಿರುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ಸಾರಿಗೆ ಇಲಾಖೆಯಲ್ಲಿ ಉದ್ಭವಿಸಿರುವ ಸಮಸ್ಯೆಗಳಲ್ಲಿ ಒಂದಾದ ವೇತನ ಪಾವತಿ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿ ಸದರಿ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಎಪ್ರಿಲ್ 2020ರಿಂದ ಸೆಪ್ಟೆಂಬರ್-2020 ರವರೆಗಿನ ವೇತನ ಪಾವತಿಸಲು ವಿಶೇಷ ಅನುದಾನ ಬಿಡುಗಡೆಗೊಳಿಸಿದೆ.
- ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿಯ ವಾಣಿಜ್ಯ ಮಳಿಗೆಗಳ ವ್ಯವಹಾರ ಸ್ಥಗಿತಗೊಂಡಿ ರುವುದರಿಂದ ವಾಣಿಜ್ಯ, ಜಾಹೀರಾತು ಮುಂತಾದವುಗಳ ಮೂಲಗಳಿಂದ ಸಂಸ್ಥೆಗೆ ಬರಬೇಕಾದ ಆದಾಯದ ಕೊರತೆಯಾಗಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಲ್ಲಿ ಕೊರೋನಾ ಭಯ ಉಂಟಾಗಿ ಬಸ್‌ಗಳಲ್ಲಿ ಪ್ರಯಾಣಿ ಸಲು ಹಿಂದೇಟು ಹಾಕುತಿದ್ದಾರೆ.

—*—*—*—